ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು
ಕೆ.ಎಸ್.ಇ.ಇ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03
ದೂರವಾಣಿ ಸಂಖ್ಯೆ: 23341615, 23562283, ಫ್ಯಾಕ್ಸ್: 080-23347670 e-mail:ksqaacbangalore@gmail.com

ಸಂಖ್ಯೆ: ಕೆ.ಎಸ್.ಕ್ಯು.ಎ.ಎ.ಸಿ/ಶಾಲಾಸಿದ್ಧಿ/ಸು/42/2018-19 ದಿನಾಂಕ:02-01-2019

## 2018-19ನೇ ಸಾಲಿನ 'ಶಾಲಾಸಿದ್ಧಿ' ಕಾರ್ಯಕ್ರಮದ ಸುತ್ತೋಲೆ

MHRD ನೇತೃತ್ವದಲ್ಲಿ NUEPA (National University of Educational Planning and Administration) ದ ಸಹಯೋಗದೊಂದಿಗೆ ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷ-ಕರ್ನಾಟಕ, ಬೆಂಗಳೂರು ರವರು ಸೂಚಿಸಿರುವಂತೆ, ಕೆ.ಎಸ್.ಕ್ಯು.ಎ.ಎ.ಸಿ ಯಿಂದ 2018-19 ನೇ ಸಾಲಿನಲ್ಲಿ ರಾಜ್ಯದಲ್ಲಿನ ಆಯ್ಕೆ ಮಾಡಿದ ಶೇ.10% ರಷ್ಟು ಸರ್ಕಾರಿ ಕಿರಿಯ, ಹಿರಿಯ ಮತ್ತು ಪ್ರೌಢಶಾಲೆಗಳಿಗೆ 'ಶಾಲಾಸಿದ್ಧಿ' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

'ಶಾಲಾಸಿದ್ಧಿ' ಕಾರ್ಯಕ್ರಮವು ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದಂತಹ ಚಟುವಟಿಕೆಯಾಗಿದ್ದು, ಶಾಲಾಹಂತದಲ್ಲಿ ಮುಖ್ಯಶಿಕ್ಷಕರು, ಶಿಕ್ಷಕರು ಹಾಗೂ ಎಸ್.ಡಿ.ಎಂ.ಸಿ. ಸದಸ್ಯರುಗಳನ್ನು ಒಳಗೊಂಡಂತೆ ಸ್ವ-ಮೌಲ್ಯಮಾಪನದ ಮೂಲಕ ಶಾಲೆಯ ಸಮಗ್ರ ಅಭಿವೃದ್ಧಿ ಯೋಜನೆಯನ್ನು ರೂಪಿಸಲು ಸಹಕಾರಿಯಾಗಿದೆ. ಪ್ರಸ್ತುತ ವರ್ಷದ ಪಿ.ಎ.ಬಿ.ಯಲ್ಲಿ ಈ ಕಾರ್ಯಕ್ರಮವನ್ನು ಗುಣಾತ್ಮಕ ಚಟುವಟಿಕೆಗಳಲ್ಲಿ ಪ್ರಮುಖವಾಗಿ ಪರಿಗಣಿಸಲಾಗಿದ್ದು, ಎಂ.ಹೆಚ್.ಆರ್.ಡಿ.ಯಿಂದ ಕೈಗೊಳ್ಳಲಾಗುವ ರಾಜ್ಯಗಳ ಶ್ರೇಣೀಕರಣದಲ್ಲಿಯೂ ಸಹ ಈ ಕಾರ್ಯಕ್ರಮದ ಅನುಷ್ಠಾನವನ್ನು ಪರಿಗಣಿಸಲಾಗಿದೆ.

'ಶಾಲಾಸಿದ್ಧಿ' ಕಾರ್ಯಕ್ರಮವು ಪ್ರತಿ ಶಾಲೆಯನ್ನು ಒಂದು ಪ್ರಮುಖ ಘಟಕವಾಗಿ ಪರಿಗಣಿಸಿ, ಶಾಲಾ ಹಂತದಲ್ಲಿ ಮುಖ್ಯಶಿಕ್ಷಕರು, ಶಿಕ್ಷಕರು ಹಾಗೂ ಎಸ್.ಡಿ.ಎಂ.ಸಿ ಸದಸ್ಯರುಗಳನ್ನು ಒಳಗೊಂಡಂತೆ ನಿಗದಿತ ಏಳು ಪ್ರಮುಖ ಕಾರ್ಯಕ್ಷೇತ್ರಗಳಲ್ಲಿ ಶಾಲೆಯ ಸ್ವ-ಮೌಲ್ಯಮಾಪನ ಹಾಗೂ ನಂತರ ಇಲಾಖೆಯ ವಿವಿಧ ಹಂತದ ಅಧಿಕಾರಿಗಳಿಂದ ಬಾಹ್ಯ ಮೌಲ್ಯಮಾಪನ ನಡೆಸುವ ಪ್ರಕ್ರಿಯೆಯನ್ನು ಒಳಗೊಂಡಿರುತ್ತದೆ.

**ಉದ್ದೇಶಗಳು:-**

1. ಶಾಲೆಯ ಸಾಮರ್ಥ್ಯಗಳು ಮತ್ತು ಅಭಿವೃದ್ಧಿಯಾಗಬೇಕಾದ ಕ್ಷೇತ್ರಗಳನ್ನು ಗುರುತಿಸುವುದು.
2. ಯೋಜಿತ ಮಾರ್ಗದರ್ಶನದ ಮೂಲಕ ಶಾಲೆಯನ್ನು ಸಬಲೀಕರಣಗೊಳಿಸುವುದು.
3. ಶಾಲೆಯ ಸುಧಾರಣೆಗಾಗಿ ವೃತ್ತಿಪರ ತೀರ್ಮಾನಗಳನ್ನು ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳಲು ಹಾಗೂ ಎಲ್ಲಾ ಭಾಗೀದಾರರು ಸಕ್ರಿಯವಾಗಿ ಪಾಲ್ಗೊಳ್ಳಲು ಸಹಭಾಗಿ ಸಂಸ್ಕೃತಿಯನ್ನು ಸೃಷ್ಟಿಸುವುದು.
4. ಶಾಲೆಯು ತನ್ನ ಸುಧಾರಣೆಯ ಹಂತವನ್ನು ನಿರ್ದಿಷ್ಟಪಡಿಸಿಕೊಂಡು ಹಂತ ಹಂತವಾಗಿ ಪ್ರಗತಿಯನ್ನು ಸಾಧಿಸಲು ಮಾರ್ಗದರ್ಶನವನ್ನು ನೀಡುವುದು.

**'ಶಾಲಾಸಿದ್ಧಿ' ಕಾರ್ಯಕ್ರಮದಡಿಯಲ್ಲಿ ಶಾಲೆಯನ್ನು 07 ಪ್ರಮುಖ ಕಾರ್ಯ ಕ್ಷೇತ್ರಗಳಲ್ಲಿ ಸ್ವ ಮತ್ತು ಬಾಹ್ಯ ಮೌಲ್ಯಮಾಪನ ಮಾಡಲಾಗುವುದು.**

1. ಶಾಲಾ ಸಂಪನ್ಮೂಲಗಳನ್ನು ಅನುವುಗೊಳಿಸುವುದು: ಲಭ್ಯತೆ, ಸೂಕ್ತತೆ ಮತ್ತು ಉಪಯೋಗಾರ್ಹತೆ.
2. ಬೋಧನೆ-ಕಲಿಕೆ ಮತ್ತು ಮೌಲ್ಯಮಾಪನ.
3. ವಿದ್ಯಾರ್ಥಿಗಳ ಪ್ರಗತಿ, ಸಾಧನೆ ಮತ್ತು ಬೆಳವಣಿಗೆ.
4. ಶಿಕ್ಷಕರ ಕಾರ್ಯನಿರ್ವಹಣೆ ಮತ್ತು ವೃತ್ತಿಪರ ಬೆಳವಣಿಗೆಯ ನಿರ್ವಹಣೆ.
5. ಶಾಲಾ ನಾಯಕತ್ವ ಮತ್ತು ನಿರ್ವಹಣೆ
6. ಒಳಗೊಳ್ಳುವಿಕೆ, ಆರೋಗ್ಯ ಮತ್ತು ಸುರಕ್ಷತೆ.
7. ಸಮುದಾಯದ ಉತ್ಪಾದಕ ಸಹಭಾಗಿತ್ವ.

ಈ ಮೂಲಕ ಶೈಕ್ಷಣಿಕ ಹಾಗೂ ಶಾಲಾ ಸಂಬಂಧಿತ ಇತರ ವಿಷಯಗಳನ್ನೊಳಗೊಂಡಂತೆ ಲಭ್ಯವಿರುವ ಸೌಲಭ್ಯಗಳು ಹಾಗೂ ಕೊರತೆಗಳನ್ನು ಮೌಲ್ಯಮಾಪನದ ಮೂಲಕ ಗುರುತಿಸಿ, ಶಾಲೆಯ ಸಮಗ್ರ ಅಭಿವೃದ್ಧಿಗೆ ಅಗತ್ಯತೆಗಳನ್ನು ಪೂರೈಸಲು ಹಾಗೂ ಕಾನೂನುಗಳನ್ನು ರೂಪಿಸಲು ಸರ್ಕಾರವು ಕ್ರಮಗಳನ್ನು ತೆಗೆದುಕೊಳ್ಳುವುದು.

**ವ್ಯಾಪ್ತಿ:–**

- ಎಸ್.ಎ.ಟಿ.ಎಸ್‌ನ ಮೂಲಕ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಪ್ರತೀ ಜಿಲ್ಲೆಯ ನಗರ ಮತ್ತು ಗ್ರಾಮೀಣ ಪ್ರದೇಶಗಳಿಂದ ಶೇ. 10 ರಷ್ಟು ಶಾಲೆಗಳನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡಲಾಗಿದೆ.
- ಆಯ್ದ ಸರ್ಕಾರಿ ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ಸ್ವ–ಮೌಲ್ಯಮಾಪನಕ್ಕೆ ಒಳಪಡಿಸಲಾಗುವುದು.
- ಸ್ವ–ಮೌಲ್ಯಮಾಪನಕ್ಕೆ ಒಳಗಾದ ಶಾಲೆಗಳಲ್ಲಿ ಶೇ.10 ರಷ್ಟು ಆಯ್ದ ಶಾಲೆಗಳನ್ನು ಮಾತ್ರ ಬಾಹ್ಯ ಮೌಲ್ಯಮಾಪನಕ್ಕೆ ಒಳಪಡಿಸಲಾಗುವುದು.
- ರಾಜ್ಯದ ಒಟ್ಟು ಸರ್ಕಾರಿ ಶಾಲೆಗಳ ಸಂಖ್ಯೆ – 48571.
  - ಕಿರಿಯ ಪ್ರಾಥಮಿಕ ಶಾಲೆಗಳು – 21441
  - ಹಿರಿಯ ಪ್ರಾಥಮಿಕ ಶಾಲೆಗಳು – 22454
  - ಪ್ರೌಢಶಾಲೆಗಳು – 4676
  - ಶಾಲಾಸಿದ್ಧಿ ಕಾರ್ಯಕ್ರಮಕ್ಕೆ ಶೇ.10 ರಷ್ಟಂತೆ ಆಯ್ಕೆ ಮಾಡಿದ ಶಾಲೆಗಳ ಸಂಖ್ಯೆ: 4826

**ಮೌಲ್ಯಮಾಪನ ವಿಧಾನ:–**

'ಶಾಲಾಸಿದ್ಧಿ' ಕಾರ್ಯಕ್ರಮವು ಶಾಲೆಯ ಸ್ವ–ಮೌಲ್ಯಮಾಪನ ಮತ್ತು ಬಾಹ್ಯ ಮೌಲ್ಯಮಾಪನವೆಂಬ ಎರಡು ಹಂತಗಳನ್ನು ಒಳಗೊಂಡಿರುತ್ತದೆ.

1. **ಶಾಲೆಯ ಸ್ವ–ಮೌಲ್ಯಮಾಪನ:–**

- ಸ್ವ–ಮೌಲ್ಯಮಾಪನವನ್ನು ಶಾಲೆಯ ಮೌಲ್ಯಮಾಪನ ಪ್ರಕ್ರಿಯೆಯ ಕೇಂದ್ರವಾಗಿ ಪರಿಗಣಿಸಲಾಗಿದೆ.
- ಶಾಲೆಯ ವಿವಿಧ ಕಾರ್ಯಕ್ಷೇತ್ರಗಳನ್ನು ಮೌಲ್ಯಮಾಪನ ಮಾಡಲು ಮತ್ತು ನಿಖರವಾದ ವೃತ್ತಿಪರ ತೀರ್ಮಾನಗಳನ್ನು ತೆಗೆದುಕೊಳ್ಳಲು ನೆರವಾಗುವುದು.
- ಶಾಲೆಯು ನಿರಂತರವಾಗಿ ಸುಧಾರಣೆಯ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಅನುವು ಮಾಡಿಕೊಡುವುದಲ್ಲದೆ ಮಾರ್ಗದರ್ಶನವನ್ನು ನೀಡುವುದಾಗಿದೆ.
- ಶಾಲೆಯ ಸ್ವ–ಮೌಲ್ಯಮಾಪನವು ಶಾಲೆಯು ಪ್ರಸ್ತುತ ಹೇಗೆ ಕಾರ್ಯನಿರ್ವಹಿಸುತ್ತಿದೆ, ಶಾಲೆಯ ವಿಶೇಷ ಸಾಮರ್ಥ್ಯಗಳು ಯಾವುವು, ಮುಖ್ಯವಾಗಿ ಸುಧಾರಣೆಯು ಅಗತ್ಯವಿರುವ ಕ್ಷೇತ್ರಗಳು ಯಾವುವು, ಶಾಲೆಯ ಪ್ರಸ್ತುತ ಸ್ಥಿತಿಯನ್ನು ತಿಳಿದುಕೊಳ್ಳಲು ಅಗತ್ಯವಾದ ಆಧಾರಗಳು ಯಾವುವು, ಶಾಲೆಯ ಕಾರ್ಯಕ್ಷಮತೆಯನ್ನು ಹೇಗೆ ಮೌಲ್ಯಮಾಪನ ಮಾಡುವುದು ಹಾಗೂ ಅದನ್ನು ಸುಧಾರಿಸಲು ಯಾವ ಕ್ರಮಗಳನ್ನು ತೆಗೆದುಕೊಳ್ಳಬಹುದು? ಎಂಬುದನ್ನು ಒಳಗೊಂಡಿರುತ್ತದೆ.
- ಇಡೀ ಶಾಲೆಯು ಸ್ವ–ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ತೊಡಗಬೇಕು. NUEPA ದ ವೆಬ್‌ಪೋರ್ಟಲ್‌ನ ಡ್ಯಾಶ್‌ಬೋರ್ಡ್‌ನಲ್ಲಿರುವ ಏಳು ಪ್ರಮುಖ ಕಾರ್ಯಕ್ಷೇತ್ರಗಳಿಗೆ ಅನುಗುಣವಾಗಿ ಅಗತ್ಯವಾದ ಎಲ್ಲಾ ಪೂರಕ ಆಧಾರಗಳನ್ನು ಸಿದ್ಧಪಡಿಸಿಕೊಂಡು, ಮುಖ್ಯಶಿಕ್ಷಕರು/ಪ್ರಾಂಶುಪಾಲರು ವಿದ್ಯಾರ್ಥಿಗಳು, ಶಿಕ್ಷಕರು, ತಂದೆ,ತಾಯಿ/ಪೋಷಕರು, ಎಸ್.ಡಿ.ಎಂ.ಸಿ ಸದಸ್ಯರು ಮತ್ತು ನಿಕಟ ಸಮುದಾಯದ ಸದಸ್ಯರು ಸೇರಿದಂತೆ ಎಲ್ಲಾ ಭಾಗೀದಾರರನ್ನು ಸ್ವ–ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡು ಶಾಲೆಯ ಸುಧಾರಣೆಯ ಅಗತ್ಯತೆಗಳನ್ನು ಚರ್ಚಿಸುವುದು.
- ರಾಜ್ಯ (ಎಸ್.ಎಸ್.ಎ) ಕಛೇರಿಯಿಂದ ನೀಡಲಾಗುವ ಸ್ವ–ಮೌಲ್ಯಮಾಪನ ಪ್ರಕ್ರಿಯೆಯ ವಿವರವಾದ 'ಶಾಲಾಸಿದ್ಧಿ' ಮಾರ್ಗಸೂಚಿ ಸಾಹಿತ್ಯ ಪುಸ್ತಕವನ್ನು ಅನುಸರಿಸುವುದು.

- ಶಾಲೆಯ ಪ್ರಮುಖ ಕಾರ್ಯಕ್ಷೇತ್ರಗಳಿಗೆ ಅನುಗುಣವಾಗಿ ಭಾಗೀದಾರರೊಂದಿಗೆ ಚರ್ಚಿಸಿ, ನಿರ್ದಿಷ್ಟವಾದ ತೀರ್ಮಾನಗಳನ್ನು ತೆಗೆದುಕೊಂಡು NUEPA ದ ವೆಬ್‌ಪೋರ್ಟಲ್‌ನಲ್ಲಿರುವ ಡ್ಯಾಶ್ ಬೋರ್ಡನ್ನು ಅಪಲೋಡ್ ಮಾಡುವುದು.
- ವೆಬ್‌ಪೋರ್ಟಲ್‌ನಲ್ಲಿರುವ ಡ್ಯಾಶ್ ಬೋರ್ಡನ್ನು ಅಪಲೋಡ್ ಮಾಡುವ ಮೊದಲು ಕಡ್ಡಾಯವಾಗಿ ಮುದ್ರಿತ ಪ್ರತಿ/ಹಾರ್ಡ್‌ಕಾಪಿಯನ್ನು ಶಾಲೆಯಲ್ಲಿ ಕಾಯ್ದಿರಿಸಿಕೊಂಡು ಬಾಹ್ಯಮೌಲ್ಯಮಾಪನದ ಎಲ್ಲಾ ಪ್ರಕ್ರಿಯೆಗಳಿಗೆ ಬಳಸುವುದು.

2. **ಬಾಹ್ಯ–ಮೌಲ್ಯಮಾಪನ:–**

- ಶಾಲೆಗಳ ಬಾಹ್ಯ–ಮೌಲ್ಯಮಾಪನವು ಶಾಲೆಯ ಸ್ವ–ಮೌಲ್ಯಮಾಪನ ಪ್ರಕ್ರಿಯೆಗೆ ಪೂರಕವಾಗಿದೆ.
- ಶಾಲೆಯು ಸ್ವ–ಮೌಲ್ಯಮಾಪನ ಮತ್ತು ಬಾಹ್ಯ–ಮೌಲ್ಯಮಾಪನದ ಎರಡೂ ವಿಧಾನಗಳ ಒಡಂಬಡಿಕೆಯೊಂದಿಗೆ ಕಾರ್ಯನಿರ್ವಹಿಸುತ್ತದೆ.
- ಶಾಲೆಯ ಸ್ವ–ಮೌಲ್ಯಮಾಪನದ ಏಳು ಪ್ರಮುಖ ಕಾರ್ಯಕ್ಷೇತ್ರಗಳಿಗೆ ಅನುಗುಣವಾಗಿ ಬಾಹ್ಯ–ಮೌಲ್ಯಮಾಪನವನ್ನು ಕೈಗೊಳ್ಳಲಾಗುವುದು.
- ಈ ಪ್ರಕ್ರಿಯೆಯು ಪಾರದರ್ಶಕತೆ, ನಿಖರತೆಯೊಂದಿಗೆ ಸಂಪೂರ್ಣ ಶಾಲಾ ಸುಧಾರಣೆಯ ಗರಿಷ್ಠ ಹಂತವನ್ನು ತಲುಪುವ ಉದ್ದೇಶವನ್ನು ಹೊಂದಿದೆ.
- ಸ್ವ–ಮೌಲ್ಯಮಾಪನದ ನಂತರ ಜಿಲ್ಲೆಯ ಡಯಟ್‌ನ ಪ್ರಾಂಶುಪಾಲರ ನೇತೃತ್ವದಲ್ಲಿ ಬಾಹ್ಯ ಮೌಲ್ಯಮಾಪಕರ ತಂಡ ಶಾಲೆಗಳಿಗೆ ಭೇಟಿ ನೀಡುವರು.
- ಬಾಹ್ಯ ಮೌಲ್ಯಮಾಪಕರು ಶಿಕ್ಷಣ ವ್ಯವಸ್ಥೆಗೆ ಆಂತರಿಕರಾಗಿದ್ದು, ಶಾಲೆಗೆ ಬಾಹ್ಯರಾಗಿರುತ್ತಾರೆ.
- ಶಾಲೆಯ ಸ್ವ–ಮೌಲ್ಯಮಾಪನದ ಆಧಾರದ ಮೇಲೆ NUEPA ದ ವೆಬ್‌ಪೋರ್ಟಲ್‌ನ ಡ್ಯಾಶ್‌ಬೋರ್ಡನಲ್ಲಿರುವ ಏಳು ಪ್ರಮುಖ ಕಾರ್ಯಕ್ಷೇತ್ರಗಳಿಗೆ ಅನುಗುಣವಾಗಿ ಅಗತ್ಯವಾದ ಎಲ್ಲಾ ಪೂರಕ ಆಧಾರಗಳನ್ನು ಸಿದ್ಧಪಡಿಸಿಕೊಂಡು, ಮುಖ್ಯಶಿಕ್ಷಕರು/ಪ್ರಾಂಶುಪಾಲರು, ವಿದ್ಯಾರ್ಥಿಗಳು, ಶಿಕ್ಷಕರು, ತಂದೆ,ತಾಯಿ/ಪೋಷಕರು, ಎಸ್.ಡಿ.ಎಂ.ಸಿ ಸದಸ್ಯರು ಮತ್ತು ನಿಕಟ ಸಮುದಾಯದ ಸದಸ್ಯರನ್ನೂ ಒಳಗೊಂಡಂತೆ ಎಲ್ಲಾ ಭಾಗೀದಾರರನ್ನು ಬಾಹ್ಯ–ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡು ಶಾಲೆಯ ಸುಧಾರಣೆಯ ಅಗತ್ಯತೆಗಳನ್ನು ಚರ್ಚಿಸುವುದು.
- ಬಾಹ್ಯ–ಮೌಲ್ಯಮಾಪಕರು ಶಾಲೆಯ ಬಾಹ್ಯ–ಮೌಲ್ಯಮಾಪನದ ಪ್ರಕ್ರಿಯೆಯ ನಂತರ NUEPA ದ ವೆಬ್‌ಪೋರ್ಟಲ್‌ನಲ್ಲಿರುವ ಡ್ಯಾಶ್ ಬೋರ್ಡನ್ನು ಅಪಲೋಡ್ ಮಾಡುವರು.
- ವೆಬ್‌ಪೋರ್ಟಲ್‌ನಲ್ಲಿರುವ ಡ್ಯಾಶ್ ಬೋರ್ಡನ್ನು ಅಪಲೋಡ್ ಮಾಡುವ ಮೊದಲು ಕಡ್ಡಾಯವಾಗಿ ಮುದ್ರಿತ ಪ್ರತಿ/ಹಾರ್ಡ್‌ಕಾಪಿಯನ್ನು ಶಾಲೆಯಲ್ಲಿ ಕಾಯ್ದಿರಿಸುವುದು.

**ರಾಜ್ಯ ಹಂತದ ಕಾರ್ಯಗಳು:–**

1. NUEPA ವತಿಯಿಂದ ತರಬೇತಿ ಪಡೆದ ಸಂಪನ್ಮೂಲ ವ್ಯಕ್ತಿಗಳಿಂದ ರಾಜ್ಯ ಹಂತದಲ್ಲಿ ಪ್ರತೀ ಜಿಲ್ಲೆಯಿಂದ ಡಯಟ್‌ನ ನೋಡಲ್ ಅಧಿಕಾರಿಯೂ ಸೇರಿದಂತೆ ಒಟ್ಟು 4 ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿಯನ್ನು ನೀಡುವುದು.
2. 'ಶಾಲಾ ಸಿದ್ಧಿ' ಸಾಹಿತ್ಯವನ್ನು ಎಸ್.ಎಸ್.ಎ ವತಿಯಂದ ಜಿಲ್ಲೆಗಳಿಗೆ ಸರಬರಾಜು ಮಾಡಲಾಗುವುದು.
3. ಜಿಲ್ಲಾ ಡಯಟ್ ಹಂತದಲ್ಲಿ ಸಿ.ಆರ್.ಪಿ, ಬಿ.ಆರ್.ಪಿ, ಬಿ.ಆರ್.ಸಿ, ಬಿ.ಇ.ಓ ಮತ್ತು ಆಯ್ಕೆಯಾದ ಶಾಲೆಗಳ ಮುಖ್ಯಶಿಕ್ಷಕರಿಗೆ ಹಾಗೂ ಬಾಹ್ಯ ಮೌಲ್ಯಮಾಪಕರಾಗಿ ಆಯ್ಕೆಯಾದ ಅಧಿಕಾರಿಗಳಿಗೆ ಒಂದು ದಿನದ ತರಬೇತಿಯನ್ನು ಆಯೋಜಿಸಲು ದಿನಾಂಕವನ್ನು ನಿಗದಿಪಡಿಸುವುದು.
4. ಜಿಲ್ಲಾ ಡಯಟ್ ಹಂತದ ತರಬೇತಿಗೆ ಅನುದಾನದ ಬಿಡುಗಡೆ.
5. ವೆಬ್‌ಪೋರ್ಟಲ್‌ನನ್ನು ಭರ್ತಿ ಮಾಡಲು ಪ್ರತಿ ಶಾಲೆಗೆ ರೂ.200/– ಗಳಂತೆ ಸಂಬಂಧಪಟ್ಟ ಜಿಲ್ಲೆಯ ಡಯಟ್‌ಗೆ ಅನುದಾನವನ್ನು ಬಿಡುಗಡೆ ಮಾಡುವುದು.
6. ಬಾಹ್ಯ ಮೌಲ್ಯಮಾಪಕರಿಗೆ ಪ್ರಯಾಣ ಭತ್ಯೆ, ದಿನ ಭತ್ಯೆ ಹಾಗೂ ವೆಬ್‌ಪೋರ್ಟಲ್‌ನನ್ನು ಭರ್ತಿ ಮಾಡಲು ಅನುದಾನದ ಬಿಡುಗಡೆ.

7. ಶಾಲೆಯ ಸ್ವ-ಮೌಲ್ಯಮಾಪನ ಮತ್ತು ಬಾಹ್ಯ-ಮೌಲ್ಯಮಾಪನದ ವೇಳಾಪಟ್ಟಿಯನ್ನು ನೀಡುವುದು.
8. ಆಯ್ಕೆಯಾದ ಎಲ್ಲ ಶಾಲೆಗಳಲ್ಲಿ ಸ್ವ-ಮೌಲ್ಯಮಾಪನ ಮುಗಿದ ನಂತರ ಹಾಗೂ ಬಾಹ್ಯ-ಮೌಲ್ಯಮಾಪನದ ನಂತರ NUEPA ದ ವೆಬ್‌ಪೋರ್ಟಲ್‌ನಲ್ಲಿರುವ ಡ್ಯಾಶ್ ಬೋರ್ಡನ್ನು ಅಪಲೋಡ್ ಮಾಡುವುದಕ್ಕೆ ಮಾರ್ಗದರ್ಶನ ಮಾಡುವುದು.

**ಜಿಲ್ಲಾ ಹಂತದ ಕಾರ್ಯಗಳು:-**

1. ಜಿಲ್ಲಾ ಹಂತದಲ್ಲಿ ಆಯ್ಕೆಯಾದ ಶಾಲೆಗಳ ಪಟ್ಟಿಯನ್ನು ಶಾಲೆಯ ಅಸ್ತಿತ್ವ , ಮಾಧ್ಯಮ, ವಿದ್ಯಾರ್ಥಿಗಳ ಸಂಖ್ಯೆ ಇತ್ಯಾದಿ ಮಾಹಿತಿಗಳಿಗನುಗುಣವಾಗಿ ಪರಿಶೀಲಿಸಿ ದೃಢೀಕರಿಸುವ ಮೂಲಕ ಕೆ.ಎಸ್.ಕ್ಯು.ಎ.ಎ.ಸಿ ಕಛೇರಿಗೆ ಮಾಹಿತಿಯನ್ನು ನೀಡುವುದು.
2. ಎಸ್.ಎಸ್.ಎ ಕೇಂದ್ರ ಕಛೇರಿಯಿಂದ ಸರಬರಾಜಾದ ಶಾಲಾಸಿದ್ಧಿ ಕಾರ್ಯಕ್ರಮದ ಸಾಹಿತ್ಯವನ್ನು ಆಯ್ಕೆಯಾದ ಶಾಲಾ ಮುಖ್ಯ ಶಿಕ್ಷಕರಿಗೆ ಹಾಗೂ ಬಾಹ್ಯ ಮೌಲ್ಯಮಾಪಕರಿಗೆ ತರಬೇತಿಯ ಸಂದರ್ಭದಲ್ಲಿ ತಲುಪಿಸುವುದು.
3. ಶಾಲಾ ಸ್ವ-ಮೌಲ್ಯಮಾಪನ ಹಾಗೂ ಬಾಹ್ಯ-ಮೌಲ್ಯಮಾಪನಗಳಿಗೆ ಮೊದಲು 'ಶಾಲಾಸಿದ್ಧಿ' ಸಾಹಿತ್ಯ ಹಾಗೂ ಡ್ಯಾಶ್ ಬೋರ್ಡ್‌ಗಳನ್ನು (www.nuepa.org/shaalasiddhi.nuepa.org) ಅಧ್ಯಯನ ಮಾಡುವುದು.
4. ಡಯಟ್‌ನ ಪ್ರಾಂಶುಪಾಲರ ನೇತೃತ್ವದಲ್ಲಿ ರಾಜ್ಯ ಹಂತದಲ್ಲಿ ತರಬೇತಿಯನ್ನು ಪಡೆದ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳ ಮೂಲಕ ತರಬೇತಿಯನ್ನು ಜಿಲ್ಲಾ ಹಂತದಲ್ಲಿ ಬಿ.ಇ.ಓ, ಬಿ.ಆರ್.ಸಿ, ಸಿ.ಆರ್.ಪಿ ಮತ್ತು ಆಯ್ಕೆಯಾದ ಶಾಲೆಗಳ ಮುಖ್ಯಶಿಕ್ಷಕರಿಗೆ ಹಾಗೂ ಬಾಹ್ಯ-ಮೌಲ್ಯಮಾಪಕರಾಗಿ ಕಾರ್ಯನಿರ್ವಹಿಸುವ ಇಲಾಖೆಯ ಅಧಿಕಾರಿಗಳಿಗೆ ಒಂದು ದಿನದ ತರಬೇತಿಯನ್ನು ಆಯೋಜಿಸುವುದು.
5. ಆಯ್ಕೆಯಾದ ಶಾಲೆಗಳ ಮುಖ್ಯಶಿಕ್ಷಕರು ಹಾಗೂ ಬಾಹ್ಯ ಮೌಲ್ಯಮಾಪಕರು ಕಡ್ಡಾಯವಾಗಿ ತರಬೇತಿಯಲ್ಲಿ ಭಾಗವಹಿಸಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.
6. ಜಿಲ್ಲಾ ಹಂತದ ತರಬೇತಿಯಲ್ಲಿ ಸ್ವ-ಮೌಲ್ಯಮಾಪನ ಮತ್ತು ಬಾಹ್ಯ-ಮೌಲ್ಯಮಾಪನಗಳೆರಡರ ಬಗ್ಗೆಯೂ ಸ್ಪಷ್ಟ ಮಾಹಿತಿಯನ್ನು/ಸೂಚನೆಗಳನ್ನು ನೀಡುವುದು.
7. ತರಬೇತಿಯನ್ನು ಪಡೆದ ಆಯ್ಕೆಯಾದ ಶಾಲೆಗಳ ಮುಖ್ಯಶಿಕ್ಷಕರು ತಮ್ಮ ಶಾಲೆಯಲ್ಲಿ 'ಶಾಲಾಸಿದ್ಧಿ' ಕಾರ್ಯಕ್ರಮದ ಒಂದು ವಹಿಯನ್ನು ತೆರೆದು, ಶಾಲಾಸಿದ್ಧಿ ಕಾರ್ಯಕ್ರಮದ ಏಳು ಪ್ರಮುಖ ಕಾರ್ಯ ಕ್ಷೇತ್ರಗಳ ಪ್ರಕಾರ ಶಾಲೆಯ ಸಂಪೂರ್ಣ ಮಾಹಿತಿಯನ್ನು ಡಾಶ್‌ಬೋರ್ಡ್‌ನಲ್ಲಿರುವ ಎಲ್ಲಾ ಕಾಲಂಗಳಿಗೆ ಪೂರಕ ಆಧಾರಗಳೊಂದಿಗೆ ಭರ್ತಿಮಾಡಿಕೊಂಡು ಅದರ ದಾಖಲೆಯನ್ನು ನಿರ್ವಹಿಸಿ ಶಾಲೆಯ ಎಲ್ಲ ಮುಂದಿನ ಅಗತ್ಯ ಕ್ರಮಗಳಿಗೆ ಬಳಸುವುದರ ಮೇಲ್ವಿಚಾರಣೆ ಮಾಡುವುದು.
8. ಶಾಲೆಯು ಸ್ವ-ಮೌಲ್ಯಮಾಪನದ ನಂತರ ಬಾಹ್ಯ ಮೌಲ್ಯಮಾಪನ ಪ್ರಕ್ರಿಯೆಗೂ ಒಳಗಾಗುವುದರಿಂದ ಎಲ್ಲಾ ಪೂರಕ ಆಧಾರಗಳು, ನಾವಿನ್ಯತಾ ಚಟುವಟಿಕೆಗಳ ದಾಖಲೆಗಳನ್ನು ನಿರ್ವಹಿಸಲು ತಿಳಿಸುವುದು.
9. ಮುಖ್ಯಶಿಕ್ಷಕರು ಭರ್ತಿ ಮಾಡಿರುವ ದಾಖಲೆಯ ಪ್ರತಿಯ ಮೂಲಕ NUEPA ರವರು ನೀಡಿರುವ WEB PORTAL (www.nuepa.org/shaalasiddhi.nuepa.org) ನ Dasgboard ನಲ್ಲಿ UPLOAD ಮಾಡಿಸುವುದು.
10. ಜಿಲ್ಲೆಯಲ್ಲಿನ ಸ್ವ-ಮೌಲ್ಯಮಾಪನಕ್ಕೆ ಒಳಗಾದ ಶಾಲೆಗಳಲ್ಲಿ ಶೇಕಡಾ 10 ರಷ್ಟು ಶಾಲೆಗಳಿಗೆ ಬಾಹ್ಯ ಮೌಲ್ಯಮಾಪನವನ್ನು ಕೈಗೊಳ್ಳುವುದು.
11. ಸ್ವ-ಮೌಲ್ಯಮಾಪನ ಮುಗಿದ ಒಂದು ವಾರದ ನಂತರ ಬಾಹ್ಯ ಮೌಲ್ಯಮಾಪನ ಕೈಗೊಳ್ಳಬೇಕಿರುವುದರಿಂದ ಶಾಲೆಗೆ ಇಬ್ಬರು/ಮೂರು ಬಾಹ್ಯ ಮೌಲ್ಯಮಾಪಕರ ತಂಡ ರಚಿಸುವುದು.
12. ಬಾಹ್ಯ ಮೌಲ್ಯಮಾಪಕರು ಶಿಕ್ಷಣ ವ್ಯವಸ್ಥೆಗೆ ಆಂತರಿಕರಾಗಿದ್ದು, ಶಾಲೆಗೆ ಬಾಹ್ಯರಾಗಿರುವುದರಿಂದ ಇಲಾಖೆಯ ಅಧಿಕಾರಿಗಳನ್ನೇ ಬಾಹ್ಯ ಮೌಲ್ಯಮಾಪಕರನ್ನಾಗಿ ನೇಮಿಸುವುದು.
13. ಸಿ.ಆರ್.ಪಿ, ಬಿ.ಆರ್.ಪಿ, ಪ್ರೌಢಶಾಲಾ ಮುಖ್ಯ ಶಿಕ್ಷಕರು, ಕ್ಷೇತ್ರಸಮನ್ವಯಾಧಿಕಾರಿಗಳು ಹಾಗೂ ಡಯಟ್‌ನ ಹಿರಿಯ/ಕಿರಿಯ ಉಪನ್ಯಾಸಕರುಗಳನ್ನು ಬಾಹ್ಯ ಮೌಲ್ಯಮಾಪಕರಾಗಿ ನಿಯೋಜಿಸುವುದು.
14. ಕಿರಿಯ, ಹಿರಿಯ ಮತ್ತು ಪ್ರೌಢಶಾಲೆಗಳಿಗೆ ವಿದ್ಯಾರ್ಥಿಗಳ ಸಂಖ್ಯೆ 100 ರೊಳಗಿದ್ದರೆ ಒಬ್ಬರು ಒಂದು ದಿನ, 110 ರಿಂದ 310 ರೊಳಗಿದ್ದರೆ ಇಬ್ಬರು ಎರಡು ದಿನ, 310 ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳಿದ್ದಲ್ಲಿ ಮೂರು ಜನ ಬಾಹ್ಯ ಮೌಲ್ಯಾಂಕನಕಾರರನ್ನು ಎರಡು ದಿನಗಳು ನಿಯೋಜಿಸುವುದು.

15. ಬಾಹ್ಯ ಮೌಲ್ಯಮಾಪಕರಿಂದ ಬಾಹ್ಯ ಮೌಲ್ಯಮಾಪನದ ನಂತರ NUEPA ದ ವೆಬ್‌ಪೋರ್ಟಲ್ ನಲ್ಲಿರುವ ಡ್ಯಾಶ್‌ಬೋರ್ಡನ್ನು ಅಪ್‌ಲೋಡ್ ಮಾಡಿಸುವುದು.
16. ಆಯ್ಕೆಯಾದ ಎಲ್ಲಾ ಶಾಲೆಗಳು ವೆಬ್‌ಪೋರ್ಟಲ್‌ನಲ್ಲಿ ಮಾಹಿತಿಯನ್ನು ಅಪ್‌ಲೋಡ್ ಮಾಡಿರುವುದರ ದೃಢೀಕರಣವನ್ನು ಕೇಂದ್ರ ಕಛೇರಿಗೆ ನೀಡುವುದು.

**ಬ್ಲಾಕ್ ಹಂತದ ಕಾರ್ಯಗಳು:-**

1. ಜಿಲ್ಲಾ ಡಯಟ್‌ನಿಂದ ತಮ್ಮ ಬ್ಲಾಕ್‌ನಲ್ಲಿ ಆಯ್ಕೆಯಾದ ಶಾಲೆಗಳ ಪಟ್ಟಿಯನ್ನು ಪಡೆದು ಶಾಲೆಯ ಅಸ್ತಿತ್ವ, ಮಾಧ್ಯಮ, ವಿದ್ಯಾರ್ಥಿಗಳ ಸಂಖ್ಯೆ ಇತ್ಯಾದಿ ಮಾಹಿತಿಗಳಿಗನುಗುಣವಾಗಿ ಪರಿಶೀಲಿಸಿ ದೃಢೀಕರಿಸುವ ಮೂಲಕ ಡಯಟ್‌ಗೆ ಮಾಹಿತಿಯನ್ನು ನೀಡುವುದು.
2. ಸದರಿ ಶಾಲೆಗಳಿಗೆ ಶಾಲಾಸಿದ್ಧಿ ಕಾರ್ಯಕ್ರಮಕ್ಕೆ ಆಯ್ಕೆಯಾಗಿರುವ ಬಗ್ಗೆ ಮಾಹಿತಿಯನ್ನು ನೀಡುವುದು.
3. ಎಸ್.ಎಸ್.ಎ ಕೇಂದ್ರ ಕಛೇರಿಯಿಂದ ಸರಬರಾಜಾದ ಶಾಲಾಸಿದ್ಧಿ ಕಾರ್ಯಕ್ರಮದ ಸಾಹಿತ್ಯವನ್ನು ಆಯ್ಕೆಯಾದ ಶಾಲಾ ಮುಖ್ಯಶಿಕ್ಷಕರಿಗೆ ತಲುಪಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
4. ಶಾಲಾ ಸ್ವ-ಮೌಲ್ಯಮಾಪನ ಹಾಗೂ ಬಾಹ್ಯ-ಮೌಲ್ಯಮಾಪನಗಳಿಗೆ ಮೊದಲು 'ಶಾಲಾಸಿದ್ಧಿ' ಸಾಹಿತ್ಯ ಹಾಗೂ ಡ್ಯಾಶ್‌ಬೋರ್ಡ್‌ಗಳನ್ನು ಅಧ್ಯಯನ ಮಾಡುವುದು.
5. ಕ್ಷೇತ್ರಶಿಕ್ಷಣಾಧಿಕಾರಿಗಳನ್ನು ಒಳಗೊಂಡಂತೆ, ಬ್ಲಾಕ್ ಹಂತದ ಅಧಿಕಾರಿಗಳು ಹಾಗೂ ಆಯ್ಕೆಯಾದ ಶಾಲೆಗಳ ಮುಖ್ಯಶಿಕ್ಷಕರು ಹಾಗೂ ಬಾಹ್ಯ ಮೌಲ್ಯಮಾಪಕರಾಗಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಕಡ್ಡಾಯವಾಗಿ ತರಬೇತಿಗೆ ನಿಗದಿತ ಸಮಯಕ್ಕೆ ಹಾಜರಾಗುವಂತೆ ಸೂಚಿಸಿ ಬಿಡುಗಡೆ ಮಾಡುವುದು.
6. ತರಬೇತಿಗೆ ನಿಯೋಜಿಸಿದ ಎಲ್ಲ ಅಧಿಕಾರಿಗಳು ಹಾಗೂ ಆಯ್ಕೆಯಾದ ಶಾಲೆಗಳ ಮುಖ್ಯಶಿಕ್ಷಕರು ಕಡ್ಡಾಯವಾಗಿ ತರಬೇತಿಯಲ್ಲಿ ಭಾಗವಹಿಸಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.
7. ಜಿಲ್ಲಾ ಹಂತದ ತರಬೇತಿಯಲ್ಲಿ ಸ್ವ-ಮೌಲ್ಯಮಾಪನ ಮತ್ತು ಬಾಹ್ಯ-ಮೌಲ್ಯಮಾಪನಗಳೆರಡರ ಬಗ್ಗೆಯೂ ಸ್ಪಷ್ಟ ಮಾಹಿತಿಯನ್ನು ಪಡೆಯುವುದು.
8. ತರಬೇತಿಯನ್ನು ಪಡೆದ ಆಯ್ಕೆಯಾದ ಶಾಲೆಗಳ ಮುಖ್ಯಶಿಕ್ಷಕರು ತಮ್ಮ ಶಾಲೆಯಲ್ಲಿ 'ಶಾಲಾಸಿದ್ಧಿ' ಕಾರ್ಯಕ್ರಮದ ಒಂದು ವಹಿಯನ್ನು ತೆರೆದು, ಶಾಲಾಸಿದ್ಧಿ ಕಾರ್ಯಕ್ರಮದ ಏಳು ಪ್ರಮುಖ ಕಾರ್ಯ ಕ್ಷೇತ್ರಗಳ ಪ್ರಕಾರ ಶಾಲೆಯ ಸಂಪೂರ್ಣ ಮಾಹಿತಿಯನ್ನು ಡಾಶ್‌ಬೋರ್ಡ್‌ನಲ್ಲಿರುವ ಎಲ್ಲಾ ಕಾಲಂಗಳಿಗೆ ಪೂರಕ ಆಧಾರಗಳೊಂದಗೆ ಭರ್ತಿಮಾಡಿಕೊಂಡು ಅದರ ದಾಖಲೆಯನ್ನು ನಿರ್ವಹಿಸಿ ಶಾಲೆಯ ಎಲ್ಲ ಮುಂದಿನ ಅಗತ್ಯ ಕ್ರಮಗಳಿಗೆ ಬಳಸುವುದು.
9. ಮುಖ್ಯಶಿಕ್ಷಕರನ್ನು ಒಳಗೊಂಡಂತೆ ಶಾಲೆಯ ಎಲ್ಲಾ ಭಾಗೀದಾರರೊಂದಿಗೆ ಶಾಲೆಯ ಪ್ರಗತಿ. ಗುಣಮಟ್ಟ ಸುಧಾರಣೆಗೆ. ಅಗತ್ಯವಿರುವ ಎಲ್ಲ ಅಂಶಗಳನ್ನು ಪೂರಕ ಆಧಾರಗಳೊಂದಿಗೆ ಚರ್ಚಿಸಿ, ಶಾಲೆಯ ಸ್ವ-ಮೌಲ್ಯಮಾಪನ ಕಾರ್ಯವನ್ನು ನಿಗದಿತ ದಿನಾಂಕದೊಳಗೆ ನಡೆಸಿ ಡ್ಯಾಶ್‌ಬೋರ್ಡನ್ನು ಅಪ್‌ಲೋಡ್ ಮಾಡಿರುವುದನ್ನು ಖಾತ್ರಿಪಡಿಸಿಕೊಂಡು ಜಿಲ್ಲಾ ಡಯಟ್‌ನ ಮೂಲಕ ಕೇಂದ್ರ ಕಛೇರಿಗೆ ಮಾಹಿತಿ ನೀಡುವುದು.
10. ಶಾಲೆಯು ಸ್ವ-ಮೌಲ್ಯಮಾಪನದ ನಂತರ ಬಾಹ್ಯ ಮೌಲ್ಯಮಾಪನ ಪ್ರಕ್ರಿಯೆಗೂ ಒಳಗಾಗುವುದರಿಂದ ಎಲ್ಲಾ ಪೂರಕ ಆಧಾರಗಳು, ನಾವಿನ್ಯತಾ ಚಟುವಟಿಕೆಗಳ ದಾಖಲೆಗಳನ್ನು ನಿರ್ವಹಿಸುವುದು ಕಡ್ಡಾಯವಾಗಿರುವುದರ ಮಾಹಿತಿಯನ್ನು ಮುಖ್ಯಶಿಕ್ಷಕರಿಗೆ ನೀಡುವುದು.
11. ಮುಖ್ಯಶಿಕ್ಷಕರು ಭರ್ತಿ ಮಾಡಿರುವ ದಾಖಲೆಯ ಪ್ರತಿಯ ಮೂಲಕ NUEPA ರವರು ನೀಡಿರುವ WEB PORTAL (www.nuepa.org/shaalasiddhi.nuepa.org) ನ Dashboard ನಲ್ಲಿ UPLOAD ಮಾಡಿಸುವುದು.
12. ಜಿಲ್ಲೆಯಲ್ಲಿನ ಸ್ವ-ಮೌಲ್ಯಮಾಪನಕ್ಕೆ ಒಳಗಾದ ಶಾಲೆಗಳಲ್ಲಿ ಶೇಕಡಾ 10 ರಷ್ಟು ಶಾಲೆಗಳಿಗೆ ಕೇಂದ್ರ ಕಛೇರಿಯ ಮಾಹಿತಿಯನ್ನಾಧರಿಸಿ ಬಾಹ್ಯ ಮೌಲ್ಯಮಾಪನವನ್ನು ಕೈಗೊಳ್ಳುವುದು.
13. ಬಾಹ್ಯ ಮೌಲ್ಯಮಾಪನದ ವೇಳಾಪಟ್ಟಿಯನ್ನು ಆಯ್ಕೆಯಾದ ಶಾಲೆಗಳಿಗೆ ತಲುಪಿಸುವುದು.
14. ಆಯ್ಕೆಯಾದ ಎಲ್ಲಾ ಶಾಲೆಗಳು ವೆಬ್‌ಪೋರ್ಟಲ್‌ನಲ್ಲಿ ಮಾಹಿತಿಯನ್ನು ಅಪ್‌ಲೋಡ್ ಮಾಡಿರುವುದರ ದೃಢೀಕರಣವನ್ನು ಜಿಲ್ಲಾ ಡಯಟ್‌ನ ಮೂಲಕ ಕೇಂದ್ರ ಕಛೇರಿಗೆ ನೀಡುವುದು.

**ಶಾಲಾ ಹಂತದ ಕರ್ತವ್ಯಗಳು:**

1. ಜಿಲ್ಲಾ ಹಂತದಿಂದ ತಮ್ಮ ಶಾಲೆ 'ಶಾಲಾ ಸಿದ್ಧಿ' ಕಾರ್ಯಕ್ರಮಕ್ಕೆ ಆಯ್ಕೆಯಾಗಿರುವ ಬಗ್ಗೆ ಮಾಹಿತಿಯನ್ನು ಪಡೆದು, ಶಾಲೆಯ ಅಸ್ತಿತ್ವ, ಮಾಧ್ಯಮ, ವಿದ್ಯಾರ್ಥಿಗಳ ಸಂಖ್ಯೆ ಇತ್ಯಾದಿ ಮಾಹಿತಿಗಳನ್ನು ಪರಿಶೀಲಿಸಿ ದೃಢೀಕರಿಸಿ ಜಿಲ್ಲಾ ಡಯಟ್‌ಗೆ ನೀಡುವುದು.
2. ಎಸ್.ಎಸ್.ಎ ಕೇಂದ್ರ ಕಛೇರಿಯಿಂದ ಸರಬರಾಜಾದ 'ಶಾಲಾಸಿದ್ಧಿ' ಕಾರ್ಯಕ್ರಮದ ಸಾಹಿತ್ಯವನ್ನು ಡಯಟ್/ಕ್ಷೇತ್ರಶಿಕ್ಷಣಾಧಿಕಾರಿಗಳಿಂದ ತಪ್ಪದೇ ಪಡೆಯುವುದು.
3. ಶಾಲಾ ಸ್ವ-ಮೌಲ್ಯಮಾಪನ ಹಾಗೂ ಬಾಹ್ಯ-ಮೌಲ್ಯಮಾಪನಗಳಿಗೆ ಮೊದಲು 'ಶಾಲಾಸಿದ್ಧಿ' ಸಾಹಿತ್ಯ ಹಾಗೂ ಡ್ಯಾಶ್ ಬೋರ್ಡ್‌ಗಳನ್ನು (www.nuepa.org/shaalasiddhi.nuepa.org) ಅಧ್ಯಯನ ಮಾಡುವುದು.
4. ಜಿಲ್ಲಾ ಡಯಟ್‌ನ ಪ್ರಾಂಶುಪಾಲರ ನೇತೃತ್ವದಲ್ಲಿ ನಡೆಯುವ ಒಂದು ದಿನದ ತರಬೇತಿಯಲ್ಲಿ ಮುಖ್ಯಶಿಕ್ಷಕರು ಹಾಗೂ ಬಾಹ್ಯ-ಮೌಲ್ಯಮಾಪನಕ್ಕೆ ಆಯ್ಕೆಯಾದ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿಸುವುದು.
5. ತರಬೇತಿಯಲ್ಲಿ ಸ್ವ-ಮೌಲ್ಯಮಾಪನ ಮತ್ತು ಬಾಹ್ಯ-ಮೌಲ್ಯಮಾಪನ ಪ್ರಕ್ರಿಯೆಗಳ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಪಡೆಯುವುದು.
6. ತರಬೇತಿಯನ್ನು ಪಡೆದ ಮುಖ್ಯಶಿಕ್ಷಕರು ತಮ್ಮ ಶಾಲೆಯಲ್ಲಿ 'ಶಾಲಾಸಿದ್ಧಿ' ಕಾರ್ಯಕ್ರಮದ ಒಂದು ವಹಿಯನ್ನು ತೆರೆದು, ಶಾಲಾಸಿದ್ಧಿ ಕಾರ್ಯಕ್ರಮದ ಏಳು ಪ್ರಮುಖ ಕಾರ್ಯ ಕ್ಷೇತ್ರಗಳ ಪ್ರಕಾರ ಶಾಲೆಯ ಸಂಪೂರ್ಣ ಮಾಹಿತಿಯನ್ನು ಡಾಶ್‌ಬೋರ್ಡ್‌ನಲ್ಲಿರುವ ಎಲ್ಲಾ ಕಾಲಂಗಳಿಗೆ ಪೂರಕ ಆಧಾರಗಳೊಂದಗೆ ಭರ್ತಿಮಾಡಿ ಅದರ ದಾಖಲೆಯನ್ನು ನಿರ್ವಹಿಸಿ ಶಾಲೆಯ ಎಲ್ಲ ಮುಂದಿನ ಅಗತ್ಯ ಕ್ರಮಗಳಿಗೆ ಬಳಸುವುದು.
7. ಇಡೀ ಶಾಲೆಯು ಸ್ವ-ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ತೊಡಗಬೇಕು. NUEPA ದ ವೆಬ್‌ಪೋರ್ಟಲ್‌ನ ಡ್ಯಾಶ್‌ಬೋರ್ಡನಲ್ಲಿರುವ ಏಳು ಪ್ರಮುಖ ಕಾರ್ಯಕ್ಷೇತ್ರಗಳಿಗೆ ಅನುಗುಣವಾಗಿ ಅಗತ್ಯವಾದ ಎಲ್ಲಾ ಪೂರಕ ಆಧಾರಗಳನ್ನು ಸಿದ್ಧಪಡಿಸಿಕೊಂಡು, ಮುಖ್ಯಶಿಕ್ಷಕರು/ಪ್ರಾಂಶುಪಾಲರು ವಿದ್ಯಾರ್ಥಿಗಳು, ಶಿಕ್ಷಕರು, ತಂದೆ,ತಾಯಿ/ಪೋಷಕರು, ಎಸ್.ಡಿ.ಎಂ.ಸಿ ಸದಸ್ಯರು ಮತ್ತು ನಿಕಟ ಸಮುದಾಯದ ಸದಸ್ಯರು ಸೇರಿದಂತೆ ಎಲ್ಲಾ ಭಾಗೀದಾರರನ್ನು ಸ್ವ-ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡು ಶಾಲೆಯ ಸುಧಾರಣೆಯ ಅಗತ್ಯತೆಗಳನ್ನು ಚರ್ಚಿಸುವುದು.
8. ಶಾಲೆಯು ಸ್ವ-ಮೌಲ್ಯಮಾಪನದ ನಂತರ ಬಾಹ್ಯ ಮೌಲ್ಯಮಾಪನ ಪ್ರಕ್ರಿಯೆಗೂ ಒಳಗಾಗುವುದರಿಂದ ಎಲ್ಲಾ ಪೂರಕ ಆಧಾರಗಳು, ನಾವಿನ್ಯತಾ ಚಟುವಟಿಕೆಗಳ ದಾಖಲೆಗಳನ್ನು ನಿರ್ವಹಿಸುವುದು ಕಡ್ಡಾಯವಾಗಿದೆ.
9. ಮುಖ್ಯಶಿಕ್ಷಕರು ಭರ್ತಿ ಮಾಡಿರುವ ದಾಖಲೆಯ ಪ್ರತಿಯ ಮೂಲಕ NUEPA ರವರು ನೀಡಿರುವ WEB PORTAL (www.nuepa.org/shaalasiddhi.nuepa.org) ನ Dashboard ನಲ್ಲಿ ಮಾಹಿತಿಯನ್ನು UPLOAD ಮಾಡುವುದು.
10. ಆಯ್ಕೆಯಾದ ಎಲ್ಲಾ ಶಾಲೆಗಳು ವೆಬ್‌ಪೋರ್ಟಲ್‌ನಲ್ಲಿ ಮಾಹಿತಿಯನ್ನು ಅಪ್‌ಲೋಡ್ ಮಾಡಿರುವುದರ ದೃಢೀಕರಣವನ್ನು ಡಯಟ್‌ನ ಮೂಲಕ ಕೇಂದ್ರ ಕಛೇರಿಗೆ ನೀಡುವುದು.
11. ಶಾಲೆಯು ಸ್ವ-ಮೌಲ್ಯಮಾಪನದ ನಂತರ ಆಯ್ಕೆಯಾದ ಶಾಲೆಗಳು ಮಾತ್ರ ಬಾಹ್ಯ-ಮೌಲ್ಯಮಾಪನ ಪ್ರಕ್ರಿಯೆಗೂ ಒಳಪಡುವುದರಿಂದ ಇಂತಹ ಶಾಲೆಗಳ ಮಾಹಿತಿಯನ್ನು ಡಯಟ್‌ಗಳಲ್ಲಿ ಪಡೆಯುವುದು.
12. ಬಾಹ್ಯ-ಮೌಲ್ಯಮಾಪನದ ವೇಳಾಪಟ್ಟಿಯನ್ನು ಬಿ.ಇ.ಓ/ಡಯಟ್‌ನಿಂದ ಪಡೆಯುವುದು.
13. ಬಾಹ್ಯ-ಮೌಲ್ಯಮಾಪನ ಪ್ರಕ್ರಿಯೆಯ ಬಗ್ಗೆ ಎಸ್.ಎಸ್.ಎ ವತಿಯಂದ ಸರಬರಾಜಾಗಿರುವ ಶಾಲಾಸಿದ್ಧಿ ಕಾರ್ಯಕ್ರಮದ ಸಾಹಿತ್ಯದಲ್ಲಿನ ಬಾಹ್ಯ-ಮೌಲ್ಯಮಾಪನ ಮಾರ್ಗಸೂಚಿಯನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳುವುದು.
14. ಬಾಹ್ಯ-ಮೌಲ್ಯಮಾಪನದ ದಿನಗಳು ಹಾಗೂ ಅಧಿಕಾರಿಗಳ ವಿವರವನ್ನು ಬಿ.ಇ.ಓ/ಡಯಟ್‌ನಿಂದ ಪಡೆಯುವುದು.
15. ಶಾಲೆಯ ಸ್ವ-ಮೌಲ್ಯಮಾಪನದ ಏಳು ಪ್ರಮುಖ ಕಾರ್ಯಕ್ಷೇತ್ರಗಳಿಗೆ ಅನುಗುಣವಾಗಿ ಬಾಹ್ಯ-ಮೌಲ್ಯಮಾಪನವನ್ನು ಕೈಗೊಳ್ಳಲಾಗುವುದು.
16. ಶಾಲೆಯ ಬಾಹ್ಯ-ಮೌಲ್ಯಮಾಪನದ ಸಂದರ್ಭದಲ್ಲಿ ಬಾಹ್ಯ-ಮೌಲ್ಯಮಾಪನಕ್ಕೆ ನಿಯೋಜನೆಗೊಂಡಿರುವ ಅಧಿಕಾರಿಗಳು ಮುಖ್ಯಶಿಕ್ಷಕರು/ಪ್ರಾಂಶುಪಾಲರು, ವಿದ್ಯಾರ್ಥಿಗಳು, ಶಿಕ್ಷಕರು, ತಂದೆ,ತಾಯಿ/ಪೋಷಕರು, ಎಸ್.ಡಿ.ಎಂ.ಸಿ ಸದಸ್ಯರು ಮತ್ತು ನಿಕಟ ಸಮುದಾಯದ ಸದಸ್ಯರು ಸೇರಿದಂತೆ ಎಲ್ಲಾ ಭಾಗೀದಾರರನ್ನು

ಬಾಹ್ಯ–ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡು ಶಾಲೆಯ ಸುಧಾರಣೆಯ ಅಗತ್ಯತೆಗಳನ್ನು ಚರ್ಚಿಸುವುದು.

17. ಶಾಲೆಯ ಬಾಹ್ಯ–ಮೌಲ್ಯಮಾಪನದ ಪ್ರಕ್ರಿಯೆಯ ನಂತರ NUEPA ದ ವೆಬ್‌ಪೋರ್ಟಲ್‌ನಲ್ಲಿರುವ ಡ್ಯಾಶ್ ಬೋರ್ಡ್‌ನ್ನು ಅಪಲೋಡ್ ಮಾಡುವುದು.
18. ವೆಬ್‌ಪೋರ್ಟಲ್‌ನಲ್ಲಿರುವ ಡ್ಯಾಶ್ ಬೋರ್ಡ್‌ನ್ನು ಅಪಲೋಡ್ ಮಾಡುವ ಮೊದಲು ಕಡ್ಡಾಯವಾಗಿ ಮುದ್ರಿತ ಪ್ರತಿ/ಹಾರ್ಡ್‌ಕಾಪಿಯನ್ನು ಶಾಲೆಯಲ್ಲಿ ಕಾಯ್ದಿರಿಸುವುದು.

'ಶಾಲಾಸಿದ್ಧಿ' ಕಾರ್ಯಕ್ರಮದ ಮುಖ್ಯ ಉದ್ದೇಶ **"ಶಾಲಾ ಮೌಲ್ಯಮಾಪನ ಒಂದು ಸಾಧನವಾಗಿ ಮತ್ತು ಶಾಲಾ ಸುಧಾರಣೆ ಒಂದು ಗುರಿ"** ಯನ್ನಾಗಿಸುವುದಾಗಿದೆ. ಈ ನಿಟ್ಟಿನಲ್ಲಿ ಶಾಲೆಯಲ್ಲಿ ಬದಲಾವಣೆಯ ಸಂಭ್ರಮಾಚರಣೆ ನಡೆಸುವುದು ಮತ್ತು ನಿರಂತರ ಸುಧಾರಣೆಯನ್ನು ಖಾತ್ರಿ ಪಡಿಸುವ ಸಂಸ್ಕೃತಿಯನ್ನು ಪ್ರಾರಂಭಿಸುವುದು ಮುಖ್ಯವಾಗಿದೆ. ಇದು ಶಾಲೆಯನ್ನು ಸುಧಾರಣೆಯ ಹಾದಿಯಲ್ಲಿ ಮುಂದುವರೆಯಲು ಪ್ರೇರೇಪಿಸುವುದು ಮಾತ್ರವಲ್ಲದೇ ಇಡೀ ಸಮುದಾಯವು ಶಾಲೆಯ ಬಗ್ಗೆ ಜವಾಬ್ದಾರರಾಗುವುದನ್ನು ಪ್ರೋತ್ಸಾಹಿಸುತ್ತದೆ. ಈ ಗುರಿಯನ್ನು ಸಾಧಿಸಲು MHRD ಯು NUEPA ದ ಮೂಲಕ ರಾಷ್ಟ್ರದ ಉದ್ದಗಲಕ್ಕೂ ಇದನ್ನು ಒಂದು ವಿಶೇಷ ಕಾರ್ಯಕ್ರಮವನ್ನಾಗಿ ಆಯೋಜಿಸಿದೆ. ಅಂತೆಯೇ ಸದರಿ ಕಾರ್ಯಕ್ರಮವನ್ನು ನಮ್ಮ ರಾಜ್ಯದಲ್ಲೂ ಯಶಸ್ವಿಗೊಳಿಸುವುದು ಇಲಾಖೆಯ ಎಲ್ಲಾ ಹಂತದ ಅಧಿಕಾರಿಗಳ ಮುಖ್ಯ ಜವಾಬ್ದಾರಿಯಾಗಿದೆ ಮತ್ತು ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿರುವ ಈ ಚಟುವಟಿಕೆಯನ್ನು ಯಶಸ್ವಿಗೊಳಿಸುವಂತೆ ಎಲ್ಲಾ ಹಂತದ ಅಧಿಕಾರಿಗಳು, ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರಿಗೆ ಈ ಮೂಲಕ ತಿಳಿಸಿದೆ.

(ವಿ. ಸುಮಂಗಲ) 3/11
**ನಿರ್ದೇಶಕರು ಪರೀಕ್ಷೆಗಳು ಹಾಗೂ**
**ಕಾರ್ಯನಿರ್ವಾಹಕ ನಿರ್ದೇಶಕರು,**
**ಕೆ.ಎಸ್.ಕ್ಯು.ಎ.ಎ.ಸಿ.**

**ಪ್ರತಿಯನ್ನು ಗೌರವ ಪೂರ್ವಕವಾಗಿ ಮಾಹಿತಿಗಾಗಿ,**

1) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಿದೆ.
2) ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ ರವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಿದೆ.

**ಪ್ರತಿಯನ್ನು,**

1) ಎಲ್ಲಾ ಜಿಲ್ಲೆಯ ಡಯಟ್ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಸೂಕ್ತ ಕ್ರಮಕ್ಕಾಗಿ.
2) ಎಲ್ಲಾ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ.
3) ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
4) ಎಲ್ಲಾ ಶಾಲಾಸಿದ್ಧಿ ಕಾರ್ಯಕ್ರಮದ ನೋಡಲ್ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
5) ಕಛೇರಿ ಪ್ರತಿ.

## 2018-19ನೇ ಸಾಲಿನ ಶಾಲಾಸಿದ್ಧಿ ಕಾರ್ಯಕ್ರಮದ ವೇಳಾಪಟ್ಟಿ

| ಕ್ರ.ಸಂ | ವಿಷಯ | ಕಾಲಾವಧಿ | ಜವಾಬ್ದಾರಿ |
|---|---|---|---|
| 1 | ಶಾಲೆಗಳ ಆಯ್ಕೆ | ಮುಗಿದಿದೆ | ಕೆ.ಎಸ್.ಕ್ಯು.ಎ.ಎ.ಸಿ |
| 2 | ರಾಜ್ಯ ಹಂತದ ಅಧಿಕಾರಿಗಳಿಗೆ 1 ದಿನದ ತರಬೇತಿ (FROM NUEPA DELIGATES) | ಮುಗಿದಿದೆ | – |
| 3 | ಪ್ರತಿ ಜಿಲ್ಲೆಯಿಂದ ತಲಾ 4 ಸಂಪನ್ಮೂಲ ವ್ಯಕ್ತಿಗಳ (ಒಬ್ಬರು ಶಾಲಾಸಿದ್ಧಿ ನೋಡಲ್ ಅಧಿಕಾರಿ+3 ಜನ ಸಂಪನ್ಮೂಲ ವ್ಯಕ್ತಿಗಳು) ಆಯ್ಕೆ | 22.12.2018 | ಜಿಲ್ಲಾ ಡಯಟ್ |
| 4 | ಬಾಹ್ಯ ಮೌಲ್ಯಮಾಪನಕ್ಕೆ ಶಾಲೆಗಳ ಆಯ್ಕೆ | 26.12.2018 | ಕೆ.ಎಸ್.ಕ್ಯು.ಎ.ಎ.ಸಿ |
| 5 | ಜಿಲ್ಲಾ ಡಯಟ್‌ನಿಂದ ಆಯ್ಕೆಯಾದ 4 ಸಂಪನ್ಮೂಲ ವ್ಯಕ್ತಿಗಳಿಗೆ ರಾಜ್ಯ ಹಂತದಲ್ಲಿ ತರಬೇತಿ | 09.01.2019, 10.01.2019, 11.01.2019 | ಕೆ.ಎಸ್.ಕ್ಯು.ಎ.ಎ.ಸಿ |
| 6 | ಬಾಹ್ಯ ಮೌಲ್ಯಮಾಪಕರ ಆಯ್ಕೆ | 16.01.2019 | ಜಿಲ್ಲಾ ಡಯಟ್ |
| 7 | ಜಿಲ್ಲಾ ಹಂತಕ್ಕೆ ಅನುದಾನದ ಬಿಡುಗಡೆ | 19.01.2019 | ಕೆ.ಎಸ್.ಕ್ಯು.ಎ.ಎ.ಸಿ |
| 8 | ರಾಜ್ಯ ಹಂತದಲ್ಲಿ ತರಬೇತಿ ಪಡೆದ 4 ಜನ ಸಂಪನ್ಮೂಲ ವ್ಯಕ್ತಿಗಳಿಂದ ಆಯ್ದ ಶಾಲಾ ಮುಖ್ಯ ಶಿಕ್ಷಕರಿಗೆ ಹಾಗೂ ಬಾಹ್ಯ ಮೌಲ್ಯಮಾಪಕರಿಗೆ ಜಿಲ್ಲಾ ಹಂತದ ತರಬೇತಿ | 22.01.2019 | ಜಿಲ್ಲಾ ಡಯಟ್ |
| 9 | ಶಾಲಾ ಸ್ವ-ಮೌಲ್ಯಮಾಪನ | 29.01.2019 ರಿಂದ 05.02.2019 | ಶಾಲಾ ಮುಖ್ಯ ಶಿಕ್ಷಕರು |
| 10 | ಶಾಲಾ ಸ್ವ-ಮೌಲ್ಯಮಾಪನದ ವಿವರಗಳನ್ನು Web portal ನಲ್ಲಿ Upload ಮಾಡಲು ಕೊನೆಯ ದಿನಾಂಕ | 15.02.2019 | ಶಾಲಾ ಮುಖ್ಯ ಶಿಕ್ಷಕರು |
| 11 | ಆಯ್ಕೆಯಾದ ಎಲ್ಲಾ ಶಾಲೆಗಳ ಸ್ವ-ಮೌಲ್ಯಮಾಪನದ ವಿವರಗಳು Web portal ನಲ್ಲಿ Upload ಆಗಿರುವ ಬಗ್ಗೆ ವರದಿಯನ್ನು ರಾಜ್ಯ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ | 19.02.2019 | ಜಿಲ್ಲಾ ಡಯಟ್ |
| 12 | ಸ್ವ-ಮೌಲ್ಯಮಾಪನದ ಬಗ್ಗೆ NUEPA ಗೆ ವರದಿ ಸಲ್ಲಿಕೆ | 20.02.2019 | ಕೆ.ಎಸ್.ಕ್ಯು.ಎ.ಎ.ಸಿ |
| 13 | ಬಾಹ್ಯ ಮೌಲ್ಯಮಾಪನ | 25.02.2019 ರಿಂದ 05.03.2019 | ಬಾಹ್ಯ ಮೌಲ್ಯಮಾಪಕರು |
| 14 | ಬಾಹ್ಯ ಮೌಲ್ಯಮಾಪನದ ವಿವರಗಳನ್ನು Web portal ನಲ್ಲಿ Upload ಮಾಡಲು ಕೊನೆಯ ದಿನಾಂಕ | 15.03.2019 | ಬಾಹ್ಯ ಮೌಲ್ಯಮಾಪಕರು |
| 15 | ಆಯ್ಕೆಯಾದ ಎಲ್ಲಾ ಶಾಲೆಗಳ ಬಾಹ್ಯ ಮೌಲ್ಯಮಾಪನದ ವಿವರಗಳು Web portal ನಲ್ಲಿ Upload ಆಗಿರುವ ಬಗ್ಗೆ ವರದಿಯನ್ನು ರಾಜ್ಯ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ | 22.03.2019 | ಜಿಲ್ಲಾ ಡಯಟ್ |
| 16 | ಬಾಹ್ಯ ಮೌಲ್ಯಮಾಪನದ ಬಗ್ಗೆ NUEPA ಗೆ ವರದಿ ಸಲ್ಲಿಕೆ | 25.03.2019 | ಕೆ.ಎಸ್.ಕ್ಯು.ಎ.ಎ.ಸಿ |
| 17 | ಉಪಯೋಗಿತ ಪ್ರಮಾಣ ಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 25.03.2019 | ಜಿಲ್ಲಾ ಡಯಟ್ |

(ವಿ. ಸುಮಂಗಲ)
ನಿರ್ದೇಶಕರು ಪರೀಕ್ಷೆಗಳು ಹಾಗೂ
ಕಾರ್ಯನಿರ್ವಾಹಕ ನಿರ್ದೇಶಕರು,
ಕೆ.ಎಸ್.ಕ್ಯು.ಎ.ಎ.ಸಿ.